# ಪರಿಚಯ

## (2 ಕೊರಿಂಥ)

*"ತಾನು ಹೇಗೆ ಕ್ರಿಸ್ತನವನೋ ಹಾಗೆ ನಾವೂ ಕ್ರಿಸ್ತನವರು ..." (10:2).*

ಒಬ್ಬ ಪ್ರಸಿದ್ಧ ಪ್ರಸಂಗಿಯು ಸದಾ ಹಡಗುಗಳು ಒಡೆದುಹೋಗುತ್ತಿದ್ದ ಅಪಾಯಕಾರಿಯಾದ ಕರಾವಳಿತೀರದಲ್ಲಿ ಸ್ಥಾಪಿಸಲಾದ ಜೀವ ಉಳಿಸಿಕೊಳ್ಳುವ ನಿಲ್ದಾಣದ ಬಗೆಗೆ ಒಂದು ಸಾಮ್ಯವನ್ನು ಹೇಳಿದರು. ಅದರ ಸ್ವಯಂ ಸೇವಕರು ಮುಳು ಗುತ್ತಿದ್ದ ಜನರನ್ನು ಉಳಿಸುವಲ್ಲಿ ಪದೇ ಪದೇ ತಮ್ಮ ಜೀವವನ್ನು ಪಣಕ್ಕೆ ಒಡ್ಡುತ್ತಿದ್ದರು. ಜೀವ ಉಳಿಸಿಕೊಳ್ಳುವ ನಿಲ್ದಾಣವು ಬೆಳೆದಂತೆ, ಅಲ್ಲಿನ ಸದಸ್ಯರು ದೋಣಿಗಳಿಗಾಗಿ ಮತ್ತು ಸಮುದ್ರದ ನೀರಿನಿಂದ ನೂಕಲ್ಪಟ್ಟ ಜನರಿಗಾಗಿ ಆಶ್ರಯತಾಣಗಳನ್ನು ಮಾಡಿದರು. ನಂತರ ಅವರು ಒಡೆದುಹೋದ ಹಡಗುಗಳಿಂದ ರಕ್ಷಿಸಲ್ಪಟ್ಟ ನಿರಾಶ್ರಿತರು ನೆಮ್ಮದಿಯಿಂದ ಇರಲು ಒಂದು ಕಟ್ಟಡವನ್ನು ನಿರ್ಮಿಸಿದರು. ಆ ಸದಸ್ಯರು ಆ ಕಟ್ಟಡವನ್ನು ನಿರ್ಮಿಸುವಲ್ಲಿ ಸಂತೋಷವನ್ನು ಹೊಂದಿದರು ವಿಶೇಷವಾಗಿ ಅವರು ತಮಗೋಸ್ಕರ ಉಪಹಾರಮಂದಿರ, ಆಟದ ಕೋಣೆ ಆರಾಮಶಾಲೆಗಳನ್ನು ಅದಕ್ಕೆ ಸೇರಿಸಿದಾಗ ಇನ್ನೂ ಸಂತಸಪಟ್ಟರು. ಆ ನಿಲ್ದಾಣವು ಬೆಳೆಯಿತು ಅನೇಕ ಪ್ರತಿಷ್ಟಿತ ಹಾಗೂ ಪ್ರಭಾವಶಾಲಿ ವ್ಯಕ್ತಿಗಳು ಸದಸ್ಯರಾಗಿ ಅಲ್ಲಿಗೆ ಸೇರಿದರು. ಕೆಲಸಮಯಗಳ ನಂತರ ಆ ಸದಸ್ಯರು ತಾವು ಆ ಕ್ಲಬ್ಬಿನಲ್ಲಿ ಮೋಜಿನಲ್ಲಿ ಸಮಯವನ್ನು ಕಳೆಯುತ್ತಾ ಜೀವ ಉಳಿಸುವ ಘನಕಾರ್ಯವನ್ನು ಬಾಡಿಗೆ ಕೆಲಸಗಾರರಿಗೆ ವಹಿಸಿಕೊಟ್ಟರು.

ಆ ನಿಲ್ದಾಣದ ಮೂಲ ಉದ್ದೇಶವು ಅಲ್ಲಿ ಕಳೆದುಹೋದದ್ದರಿಂದ ಈ ಬೆಳವಣಿಗೆಯು ಜೀವ ಉಳಿಸುವ ಕಾರ್ಯದ ನಿಲ್ದಾಣದ ಕೆಲ ಸದಸ್ಯರಿಗೆ ಬಲು ಅಸಂತೋಷವನ್ನು ಉಂಟುಮಾಡಿತು, ಅವರು ಕ್ರಮೇಣವಾಗಿ ಅದಕ್ಕೆ ರಾಜೀನಾಮೆಯನ್ನು ಕೊಟ್ಟರು ಮತ್ತು ನಂತರದಲ್ಲಿ ಇನ್ನೊಂದು ತೀರದಡಿಯಲ್ಲಿ ಅವರು ಜೀವ ಉಳಿಸುವ ನಿಲ್ದಾಣವನ್ನು ತೆರೆದರು. ದಿನಗಳು ಉರುಳಿದಂತೆ, ಆ ಹೊಸದಾದ ನಿಲ್ದಾಣವೂ ಕೂಡ ಅದೇ ರೀತಿಯ ಬೆಳವಣಿಗೆಯಾಗಿ ಹಾಗೆಯೇ ಮೊದಲಿದ್ದ ನಿಲ್ದಾಣದಂತೆ ಆಗತೊಡಗಿದ್ದರಿಂದ ತಿರುಗಿ ಇನ್ನೊಂದು ಗುಂಪು ಇನ್ನೊಂದೆಡೆಗೆ ಹೊಸದಾದ ನಿಲ್ದಾಣವನ್ನು ಪ್ರಾರಂಭಿಸಿತು. ಇಂದು ಕೂಡಾ ಅನೇಕ ಒಡೆದ ಹಡಗುಗಳು ಹೋಗುತ್ತಿದ್ದರೂ ಅಲ್ಲಿರುವ ಒಂದು ನಿಲ್ದಾಣವೂ ಕೂಡಾ ಜೀವ ಉಳಿಸುವ ಕಾರ್ಯದಲ್ಲಿ ಆಸಕ್ತಿಯನ್ನು ಹೊಂದಿಲ್ಲ.

ಈ ಕಥೆಯ ಅರ್ಥವನ್ನು ಕಂಡುಕೊಳ್ಳುವದು ಕಷ್ಟಸಾಧ್ಯವಾದುದೇನಲ್ಲ. ಅನೇಕ ಸಂಸ್ಥೆಗಳು ತಮ್ಮ ಶಕ್ತಿ ಮತ್ತು ಚೈತನ್ಯದ ಕುರುಹನ್ನು ತೋರಿಸುತ್ತಿದ್ದರೂ ಕೂಡಾ ತಮ್ಮ ಮೂಲ ಉದ್ದೇಶದಿಂದ ದೂರಹೋಗಿರುವದರ ಬಗ್ಗೆ ನಾವು ಅರಿವುಳ್ಳವರಾಗಿದ್ದೇವೆ. ಈ ಪ್ರಕ್ರಿಯೆಯು ಸಭೆಯ ಜೀವಿತ ಮತ್ತು ಸೇವೆಯಲ್ಲಿಯೂ ಕೂಡಾ ಸಂಭವಿಸುತ್ತದೆ. ಚೇತನವನ್ನೂ ಮತ್ತು ಸಾಮರ್ಥ್ಯವನ್ನೂ ಸೂಚಿಸುವಂತ ಅಸಾಧಾರಣವಾದ ಕಾರ್ಯಕ್ರಮಗಳು ಇಂದೂ ಸ್ಥಳೀಯ ಸಭೆಯಲ್ಲಿ ಜರಗುತ್ತವೆ. ಜೀವಿತದ ಅನೇಕ ಪರ್ಯಾಯ ಮಾದರಿಗಳನ್ನು ನಾವು ಗಮನಿಸು ವಾಗ, ಕೆಲ ಪ್ರಶ್ನೆಗಳನ್ನು ಕೇಳಿ ಕೊಳ್ಳಲೇಬೇಕು: ವಿವಿಧ ಮಾದರಿಗಳು ಸಭೆಯ ಉದ್ದೇಶಗಳಿಗೆ ಅಧಿಕೃತವಾದುದಕ್ಕೆ ಸಮಾನವಾಗಿವೆಯಾ? ಅಧಿಕೃವಾದಂತಹ ಕಾರ್ಯಕ್ರಮಗಳನ್ನು ನಿರ್ಧರಿಸುವಲ್ಲಿ ಯಾವ ಮಾನವನ್ನು ನಾವು ಬಳಸುತ್ತಿದ್ದೇವೆ? ಸಭೆಯು, ಮೂಲ ಉದ್ದೇಶದಿಂದ

ಅಳಿಸಿಹಾಕಲ್ಪಟ್ಟ ಜೀವ ಉಳಿಸುವ ನಿಲ್ದಾಣಗಳಲ್ಲಿ ಒಂದಾಗಬಹುದೇ?

ಮಾಧ್ಯಮಗಳಲ್ಲಿನ ಕ್ರೈಸ್ತತ್ವದ ಸಾಮಾನ್ಯವಾದ ಚಿತ್ರಣವು ಧಾರ್ಮಿಕ ಸಂಸ್ಥೆಗಳನ್ನು ಹಿಯಾಳಿಸುವುದು ಸರ್ವಸಾಮಾನ್ಯವಾಗಿದೆ. ಸೇವಕನು ಸಾಮಾನ್ಯವಾಗಿ ಕಪಟಿಯೂ ಮತ್ತು ಸ್ವಾರ್ಥಿಯೂ ಆಗಿ ಚಿತ್ರಿಸಲ್ಪಡುತ್ತಾನೆ. (Sinclair Lewis' Elmer Gantry) ಒಬ್ಬ ಸಣ್ಣ ವ್ಯಾಪಾರಿಯಾಗಿದ್ದು, ಧರ್ಮವನ್ನು ತನ್ನ ಸಮೃದ್ಧಿಗಾಗಿ ಮತ್ತು ಜನಸಮೂಹವನ್ನು ಮೋಸಮಾಡಲು ಬಳಸಿಕೊಂಡನು. ಜನರು ಮತ್ತು ಸಂಸ್ಥೆಗಳು ತಮ್ಮನ್ನು ಸಮೃದ್ಧರನ್ನಾಗಿಸಿಕೊಳ್ಳಲು ನಿಯೋಗಿಗಳಾಗಿರುತ್ತಾರಲ್ಲದೇ ಮತ್ತೇನಿಲ್ಲ ಎಂಬ ಕಥೆಗಳನ್ನು ಎತ್ತಿ ತೋರಿಸಿ ಬೆಳಕು ಚೆಲ್ಲುವಲ್ಲಿ ಮಾಧ್ಯಮವು ಸದಾ ಕಾಣಿಸಿಕೊಳ್ಳುತ್ತದೆ. ಸಾಹಿತ್ಯದ ಒಂದು ಶ್ರೇಷ್ಟ ಮೇರು ಕೃತಿಗಳಲ್ಲಿ ಒಂದಾದ, (Dostoevski) ವ್ಯವಸ್ಥಿತವಾದ ಧರ್ಮದ ಅಧಿಕೃತತೆಯ ಬಗೆಗೆ ಎದ್ದಂತ ಗಂಭೀರವಾದ ಸಂಶಯದ ಬಗೆಗೆ ಒಂದು ಕಥೆಯನ್ನು ಹೇಳುತ್ತದೆ. ಈ ಕಥೆಯಲ್ಲಿ ಯೇಸು ಕ್ರಿಸ್ತನು ಭೂಮಿಗೆ ಹಿಂತಿರುಗಿ ಬರುತ್ತಾನೆ. ಆತನು ಸ್ಪೇನದ ಒಂದು ಚಿಕ್ಕ ಪಟ್ಟಣಕ್ಕೆ ಬರುತ್ತಾನೆ ಎಂದು (*The Brothers Karamazov*) ಎಂಬ ಕಥೆಯಲ್ಲಿ ಬರುತ್ತದೆ. ನಂತರ ಅವರ ಕಾರ್ಯಗಳಲ್ಲಿ ಮಧ್ಯಪ್ರವೇಶಿಸುವಲ್ಲಿ ಆತನಿಗೆ ಯಾವುದೇ ಹಕ್ಕಿಲ್ಲ ಎಂದು ಹೇಳುವಂತಹ ಒಂದು ಧರ್ಮದ ಸೈನ್ಯವು ಆತನನ್ನು ಕೂಡಲೇ ಸೆರೆಮನೆಗೆ ಸ್ಥಳಾಂತರಿಸಿತು. ಕೊನೆಯಲ್ಲಿ ಯೇಸುವು "ಹೊರಟು ಹೋಗಿರಿ, ಮರಳದಿರಿ, ಇನ್ನೆಂದಿಗೂ ಹಿಂತಿರುಗದಿರಿ - ಎಂದಿಗೂ ಎಂದೆಂದಿಗೂ!" ಎಂದು ಹೇಳಿದನು. ಲೇಖಕನು ಹೇಳುವುದೇನೆಂದರೆ ಕ್ರೈಸ್ತತ್ವವು ಅದರ ಅಧಿಕೃತತೆಯನ್ನು ಕಳೆದುಕೊಂಡಿತು ಎಂದು.

ಕ್ರೈಸ್ತತ್ವದ ಅಧಿಕೃತತೆಯ ಬಗೆಗೆ ಮಾತನಾಡುವವರು, ಸಾಮಾನ್ಯವಾಗಿ, ತಮ್ಮಲ್ಲಿಯ ಕ್ರೈಸ್ತರ ನಿಶ್ಚಿತತೆಯ ಬಗೆಗೆ ಮಾತನಾಡುವುದರಲ್ಲಿ ಅವರು ಕ್ರೈಸ್ತರು ನೈಜವಾದ ಕ್ರೈಸ್ತೀಯತೆಯನ್ನು ಪ್ರತಿನಿಧಿಸುತ್ತಿದ್ದಾರೋ ಎಂದು ಕೇಳುವಲ್ಲಿ ಹೆಚ್ಚಾಗಿ ಸಭೆಗಳಲ್ಲಿ ತಮ್ಮ ಬಲ ಮತ್ತು ಪ್ರಭಾವವನ್ನು ವಿಸ್ತರಿಸುವುದರಲ್ಲಿಯೇ ಆಸಕ್ತರಾಗಿರುತ್ತಾರಲ್ಲದೇ ಮತ್ತೇನಿಲ್ಲ ಎಂದು. ಜಗತ್ತಿನ ಇತರ ಮಟ್ಟಗಳಂತೆ ಉತ್ತುಂಗ ರೀತಿಯಲ್ಲಿ ಇರುವುದಕ್ಕಾಗಿ ಕ್ರೈಸ್ತರು ಪ್ರತಿಪಾದಿಸಿದ್ದಾದರೆ, ಅವರು ಯೇಸು ಕ್ರಿಸ್ತನ ಬದಲಾಗಿ ಲೋಕದ ಮಟ್ಟಗಳನ್ನೇ ಆರಿಸಿಕೊಂಡಿದ್ದಾರೆ ಎಂಬ ವಿಮರ್ಷೆಗೆ ಒಳಗಾಗುತ್ತಾರೆ.

ನಾವು ಸಭೆಯ ಮತ್ತು ಸೇವೆಯ ಸಾಮಾನ್ಯವಾದ ವರ್ಣನೆಯ ಬಗೆಗೆ ಅರಿತುಕೊಳ್ಳುವಲ್ಲಿ ಮೊದಲಾಗದೆ, "ವಿಶ್ವಾಸದ ಅಂತರದ" ಸಮಸ್ಯೆಯಾಗಿರಬಹುದು ಎಂಬ ನಿರ್ಧಾರಕ್ಕೆ ನಾವು ಬರಬಹುದು. ಕ್ರಿಸ್ತೀಯ ನಾಯಕರುಗಳು ತಮ್ಮ ಗುಣವಿಮರ್ಷೆಮಾಡಿ ಬಯಸುವವರಿಗೆ ಅವಕಾಶವಾದಿಗಳು ಎಂಬ ನಿರ್ಧಾರಕ್ಕೆ ಕೂಡಾ ಬರಬಹುದು. ಈ ಪ್ರಶ್ನೆಗಳನ್ನು ನಾವು ಸಹಜವಾಗಿ ತೆಗೆದುಹಾಕಲಾಗದು, ಇದು ನಾವು ನಮ್ಮ ಅಧಿಕೃತತೆಯನ್ನು ಎದುರಿಸುವ ಪರೀಕ್ಷೆಯಲ್ಲಿ ನಮ್ಮನ್ನು ವಿಫಲರನ್ನಾಗಿಸುವ ಸಾಧ್ಯತೆಗಳು ಇವೆ ಎಂದು ನನಗೆ ಚೆನ್ನಾಗಿ ತಿಳಿದಿದೆ. ವಾಸ್ತವವಾಗಿ, ನಾವು ಸರಿಯಾದ ಸಂಗತಿಗಳನ್ನು ಹೇಳಬಹುದು ಮತ್ತು ಸರಿಯಾದ ಗತಿಯ ಮೂಲಕ ಸಾಗಬಹುದು ಮತ್ತು ಆದರೂ ಕೂಡಾ ನಾವು ಅಧಿಕೃತ ಕ್ರೈಸ್ತರಾಗದೇ ಇರಲು ಸಾಧ್ಯ.

ನಮ್ಮ ಸಭೆಯ ಅಸ್ಥಿತ್ವಕ್ಕೆ ಅಧಿಕೃತತೆಯ ಪ್ರಶ್ನೆಯು ಮೂಲಭೂತವಾಗಿದೆ ಯಾಕೆಂದರೆ ಬೇರೆ ಬೇರೆ ವಿಧದಲ್ಲಿ ನಾವು ಇದನ್ನು ಎದುರಿಸಬೇಕಾಗುವದು. ಉದಾಹರಣೆಗೆ, ಸಭೆಗೆ ನಿರ್ಧಿಷ್ಟವಾಗಿ "ಸಭೆಯ ಅಸ್ಥಿತ್ವದ" ಕುರಿತು ಪ್ರಶ್ನಿಸಲು ಅವಕಾಶವಿದೆ ಹಾಗೂ ಅಧಿಕೃತತೆಗೆ ಅವಷ್ಯವಿರುವ ಕಾರ್ಯಕ್ರಮಗಳನ್ನು ನಿರ್ಧರಿಸಲಿಕ್ಕೆ ಅವಕಾಶವಿದೆ. ನಮ್ಮ ಅಯವ್ಯಯ ಮತ್ತು ಕಟ್ಟಡಗಳು ನಮ್ಮ ಅಧಿಕೃತತೆಯ ದೃಷ್ಟಿಯ ಮೇಲೆ ಪ್ರತಿಬಿಂಬಿಸುವಂತವವುಗಳಾಗಿವೆ. ನಮ್ಮ ಸೇವಕರ ಮತ್ತು ನಾಯಕರ ಆಯ್ಕೆಯು ನಮ್ಮ ಕ್ರೈಸ್ತತ್ವದ ಅಧಿಕೃತತೆ ಮೇಲೆ ಪ್ರತಿಬಿಂಬಿಸುವಂತದ್ದಾಗಿದೆ. ನಾವು ನಮ್ಮ ನ್ಯಾಯತೀರ್ಪಿ

ಗನುಗುಣವಾಗಿ ಅದಿಕೃತ ಕ್ರೈಸ್ತರನ್ನುನಾಯಕರನ್ನಾಗಿ ಆರಿಸುವರಾಗಿರುತ್ತೇವೆ ವಾಸ್ತವವಾಗಿ, ನಾವು ಹೆಚ್ಚಾಗಿ ಮಾಡುವ ಪ್ರತಿಯೊಂದು ನಿರ್ಧಾರಗಳು ಕ್ರೈಸ್ತನ ವಿಶಿಷ್ಟ ಗುರುತು ಏನು: ಎಂಬ ಪೂರ್ವ ಪ್ರಶ್ನೆಗೆ ಮೂಲವಾಗಿರುತ್ತವೆ?

ಅಯವ್ಯಯದ ಮತ್ತು ಕಟ್ಟಡಗಳ ಮೂಲಸ್ಥಿತಿಯ ಹಿಂದೆ ಅನೇಕ ಮೂಲಭೂತವಾದ ಪ್ರಶ್ನೆಗಳಿವೆ: ಅಧಿಕೃತ ಸಭೆಯ ಗುರುತು ಏನು? ನಮ್ಮ ಸಮಾಜದಲ್ಲಿ, ನಾವು ಪ್ರಶ್ನೆ ಇಲ್ಲದಿರುವವರಾಗಿರುವುದಿಲ್ಲ. ಇಲ್ಲಿನ ಸಮಸ್ಯೆಯು ಏನೆಂದರೆ ನಾವು ಯಾವಾಗಲೂ ತದ್ವಿರುದ್ಧವಾದ ಉತ್ತರಗಳನ್ನು ಹೊಂದಿದವರಾಗಿರುತ್ತೇವೆ. ಅಧಿಕೃತ ಕ್ರೈಸ್ತತ್ವವು ವಿಭಿನ್ನ ಸಂಗತಿಗಳಿಗೆ ಮತ್ತು ವಿಭಿನ್ನ ವ್ಯಕ್ತಿಗಳಿಗೆ ಕಾಣುತ್ತದೆ. ಈ ಪ್ರಶ್ನೆಯ ಮೇಲಿನ ಹೊಂದಾಣಿಕೆಯ (ಸಮನ್ವಯದ) ಕೊರತೆಯು ಸ್ಥಳೀಯ ಸಭೆಯೊಳಗೆ ವಿನಾಶಕರವಾದ ಪರಿಣಾಮಗಳನ್ನು ತರಬಲ್ಲದು. ಅಧಿಕೃತ ಕ್ರೈಸ್ತನ ಗುರುತು ಎಂದರೆ ಆತನ ವೈಯಕ್ತಿಕವಾದ ಧಾರ್ಮಿಕ ಅನುಭವವೇ ಎಂದು ಕೆಲವರು ತರ್ಕಿಸುವವರಾಗಿದ್ದಾರೆ. ಈ ಪ್ರತಿಕ್ರಿಯೆಯ ಅನುಭವವನ್ನೂ ಸೇವೆಯ ನೈಜತೆಯಲ್ಲಿ ಪ್ರಮಾಣಿಕರಿಸಂತದ್ದನ್ನೂ ಎತ್ತಿ ತೋರಿಸುವಂತವರಲ್ಲಿ ಕೇಳುವಂತದ್ದಾಗಿದೆ. ಎರಡನೆಯ ಉತ್ತರವು ಎದ್ದುಕಾಣುವ ಯಶಸ್ಸಿನ ಪರೀಕ್ಷೆಯನ್ನು ಸರಳವಾಗಿ ಅನ್ವಯಿಸಬಹುದು. ನಮ್ಮ ಕ್ರೈಸ್ತತ್ವದ ನಂಬಿಕೆಗೆ ಮಾರುಕಟ್ಟೆಯ ಮಟ್ಟವನ್ನು ಅನ್ವಯಿಸಲು ನಾವು ಶೋಧಿಸಲ್ಪಡುತ್ತೇವೆ. ಈ ಮಟ್ಟವು ಅನ್ವಯಿತವಾದಾಗ, ಅಧಿಕೃತತೆಯ ಗುರುತು ಅಂಕಿಸಂಖ್ಯೆಯಲ್ಲಿಯೇ ಮುಳುಗಿ ಹೋಗುತ್ತದೆ. ಸಭೆಯ ಯಶಸ್ಸು ಮತ್ತು ವಿಫಲತೆಯು ಅದರ ಸದಸ್ಯತ್ವದ ಉಳಿದುಕೊಳ್ಳುವಿಕೆ ಮತ್ತು ಕಳೆದುಕೊಳ್ಳುವಿಕೆಯ ಒಟ್ಟು ದಾಖಲಾತಿ ಹಾಗೂ ಸ್ಥಿರಾಸ್ಥಿಗಳ ಮೇಲೆ ಅವಲಂಭಿತವಾಗಿದೆ. ಈ ಮಟ್ಟವನ್ನು ಅನ್ವಯಿಸಿದ್ದಾದರೆ, ಸಭೆಯ ಪ್ರತೀಷ್ಟೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಎಷ್ಟು ಸಾಧ್ಯವೊ ಅಷ್ಟು ಜನರನ್ನು ಆಕರ್ಷಿಸುವಂತಹದನ್ನು ಮಾಡುವದು ಸಭೆಯ ನಾಯಕರುಗಳ ಜವಾಬ್ದಾರಿಯಾಗಿದೆ.

ಇನ್ನೊಂದು ಉದಾಹರಣೆಯಲ್ಲಿ, ಸಾಮಾಜಿಕ ಮತ್ತು ಆರ್ಥಿಕತೆಯಲ್ಲಿ ನೆಮ್ಮದಿ ಕೊಡುವುದರಲ್ಲಿ ತೊಡಗಿಸಿಕೊಳ್ಳುವುದರಲ್ಲಿ ಮಾತ್ರ ಸಭೆಯ ಸೀಮಿತವಾದುದ್ದಾಗಿದೆ. ಸಭೆಯು ಹೊಂದಿರುವ ತತ್ವಾಂಶಗಳು ಮತ್ತು ಬೋಧನೆಗಳನ್ನು ಪರೀಕ್ಷಿಸಬೇಕೆಂದು ಕೆಲವರು ಹೇಳುತ್ತಾರೆ. ಆದ್ದರಿಂದ ಒಬ್ಬ ಕ್ರೈಸ್ತನಲ್ಲಿರಬೇಕಾದ ಗುರುತುಗಳ ಬಗೆಗೆ ಅನೇಕ ರೂಪಗಳನ್ನು ನಾವು ಹೇಳುವವರಾಗಿದ್ದೇವೆ.

ಈ ಪ್ರಶ್ನೆಯು ವಿಶೇಷವಾಗಿ ಸಭೆಯನ್ನು ಸೇವೆಗಾಗಿ ಸನ್ನದ್ಧರನ್ನಾಗಿಸುವ ಕಾರ್ಯದ ಕುರಿತಾಗಿದೆ. ಸೇವೆಯ ಅನೇಕ ತದ್ವಿರುದ್ಧವಾದ ವಿಚಾರಗಳ ಕಾರಣದಿಂದ ಸಂಪೂರ್ಣವಧಿಯ ಕೆಲಸದಲ್ಲಿ ತೊಡಗಿರುವವರು ತಮ್ಮ ಕೆಲಸಕ್ಕಾಗಿ ಯೋಗ್ಯವಾದ ಮಾದರಿಯು ಸಭೆ ಹೊರಗಿನಿಂದ ಬರುವಂತದ್ದಾಗಿದೆ ಸೇವಕನು ದಕ್ಷತೆ ಮತ್ತು ಬೆಳವಣಿಗೆಯಲ್ಲಿ ಸಹಕಾರದ ಪರಮಾವಧಿಯನ್ನು ಹೆಚ್ಚಿಸುವ ಮಟ್ಟದ ಪಥದಲ್ಲಿ ಸಾಗಬೇಕು ಎಂದು ಕೆಲವರು ಅಪೇಕ್ಷೆ ಪಡುತ್ತಾರೆ. ಇತರರು ಆತನ ಮಾದರಿಯನ್ನು ವೃತ್ತಿಪರ ಸಲಹೆಗಾರನಂತೆ ಕಾಣುವವರಾಗಿದ್ದಾರೆ. "ಗುರುತಿಸಿಕೊಳ್ಳಬೇಕಾದ ಸಂಕಟ" ಒಂದು ಸಮಸ್ಯೆಯಾಗಿದ್ದು, ಇದು ಸೇವಕನಿಗೆ ಮಾತ್ರವಲ್ಲ, ಆದರೆ ಇಡೀ ಸಭೆಯ ಸಮಸ್ಯೆಯೂ ಕೂಡ ಆಗಿದೆ. ಕ್ರೈಸ್ತ ನಾಯಕತ್ವದಲ್ಲಿ ಮತ್ತು ಸಭೆಯ ಕಾರ್ಯಕ್ರಮದಲ್ಲಿ ಅನೇಕ ವೈಕಲ್ಪಿತ ವಿಧಗಳನ್ನು ನಾವು ಕಾಣುವವರಾಗಿದ್ದು ಕ್ರೈಸ್ತನ ಗುರುತೇನು: ಎಂಬ ಮೂಲಭೂತವಾದ ಪ್ರಶ್ನೆಯನ್ನು ಕೇಳುವುದಕ್ಕೆ ತಿರುಗಿಕೊಳ್ಳುವರಾಗಿರಬೇಕು?

## ಕದ್ದುಕೇಳಲ್ಪಡುವ ಹೊಸ ಒಡಂಬಡಿಕೆ

ಹೊಸ ಒಡಂಬಡಿಕೆಯ ಶಕ್ತಿಯ ಮುಂದುವರಿಕೆಗೆ ಇರುವ ಕಾರಣದ ನಮ್ಮ ಪ್ರಶ್ನೆಯು ಈಗಾಗಲೇ ಮೊದಲನೆಯ ಶತಮಾನದಲ್ಲಿ ಕೇಳಲ್ಪಟ್ಟಿದೆ. ವಾಸ್ತವವಾಗಿ, ನಮ್ಮ ಸ್ವಂತ

ಪ್ರಶ್ನೆಗಳ ನಿಮಿತ್ತವಾಗಿಯೇ ಪತ್ರಿಕೆಗಳು ಬರೆಯಲ್ಪಟ್ಟವು. ಅಧಿಕೃತವಾದ ಸೇವೆಯು ಯಾವದು ಎಂದು ಕಂಡುಹಿಡಿಯುವ ಆಶಯ ನಮ್ಮದಾಗಿದ್ದರೆ, ನಾವು ಪೌಲನು ಮತ್ತು ಕೊರಿಂಥ ಸಭೆಯವರ ಮಧ್ಯ ನಡೆದಂತಹ ಚರ್ಚೆಯನ್ನು ಕದ್ದು ಕೇಳಿದ್ದರಿಂದ ಪ್ರಯೋಜನವನ್ನು ಹೊಂದುತ್ತೇವೆ. ಕೊರಿಂಥ ಸಭೆಯ ಸ್ಥಾಪನೆಯ ಆರಂಭದಿಂದಲೇ (ಹೋಲಿಸಿ ಅಪೊಸ್ತಲರ ಕೃತ್ಯಗಳು 18:1-17), ಪೌಲನು ಹೊಂದಿರುವ ಉಗ್ರವಾದ ಸಂಬಂಧವು ಒಂದು ಸಂಕಟದಿಂದ ಮತ್ತೊಂದಕ್ಕೆ ಹೋದಂತೆ ಕಾಣುತ್ತದೆ. ಈ ಸಂಕಟಗಳು 1 ಕೊರಿಂಥವನ್ನು ಬರೆಯುವಾಗಲೂ ಕೂಡಾ ಮುಗಿದಿರಲಿಲ್ಲ. ಪೌಲನು 1 ಕೊರಿಂಥವನ್ನು ಬರೆದೊಡನೆಯೇ, ಹೊಸದಾದ ಸಮಸ್ಯೆಗಳಿಗೆ ಸಂಬಂಧಿತ ಕೆಲ ಸಮಸ್ಯೆಗಳು ಹುಟ್ಟಿಕೊಂಡವು. ವಾಸ್ತವವಾಗಿ, 1 ಕೊರಿಂಥ ಪತ್ರಿಕೆಯನ್ನು ತಲುಪಿಸಿದ ತಿಮೊಥೆಯನು, ಅಲ್ಲಿ ಹೊಸದಾದ ಪ್ರಶ್ನೆಗಳೂ ಇದೆ ಎಂದು ಪೌಲನಿಗೆ ತಿಳಿಸಲು ಅವನೆಡೆಗೆ ಮರಳಿದನು.

ಕೊರಿಂಥದವರು ಎದುರಿಸುತ್ತಿರುವ ಹೊಸ ಸಂಗತಿಗಳು 10:1-11ರಲ್ಲಿ ಉಲ್ಲೇಖವಾಗಿದೆ. ಪೌಲನು ಅಪಾಯದ ಅಡಿಯಲ್ಲಿ ಇದ್ದಾನೆ ಎಂಬುದನ್ನು ಪೌಲನ ಬರಹಗಳಲ್ಲಿ ನಾವು ಕೂಡಲೇ ಕಂಡುಕೊಳ್ಳಬಹುದು. ವಾಸ್ತವವಾಗಿ, 10:1, 2 ಪೌಲನು ಟೀಕಿಸಲ್ಪಟ್ಟದ್ದನ್ನು ನಾವು ಗಮನಿಸಬಹುದು. ನಾವು ಬಹುತೇಕವಾಗಿ ಕೊಂಕುತನದ ಅಂಶವನ್ನು 10:1ರಲ್ಲಿ ಗಮನಿಸುವವರಾಗಿದ್ದು, ಆತನ ವಿರುದ್ಧವಾಗಿ ಹೇಳಲ್ಪಟ್ಟ ಟೀಕೆಗಳನ್ನು ಪೌಲನು ಸಾಮಾನ್ಯವಾಗಿ ಸೂಚಿಸುತ್ತಿರಬಹುದು. 10:2ರ ಪ್ರಕಾರ, "ಕೆಲವರು" ಪೌಲನು ಲೌಕಿಕ ರೀತಿಯಲ್ಲಿ "ದೈಹಿಕವಾದವುಗಳ ಪ್ರಕಾರ" ನಡೆಯುವವನಾಗಿದ್ದಾನೆ ಎಂದು ಹೇಳುವವನಾಗಿದ್ದಾನೆ. ಇದೇ ವಿಷಯವು 10:7ರಲ್ಲಿ, "... ಯಾವನಾದರೂ ತನ್ನನ್ನು ಕ್ರಿಸ್ತನವನು ಎಂದು ನಂಬಿಕೊಂಡರೆ ಅವನು ತಿರುಗಿ ಆಲೋಚನೆ ಮಾಡಿಕೊಂಡು ತಾನು ಹೇಗೆ ಕ್ರಿಸ್ತುವನವನೋ ಹಾಗೆ ನಾವು ಕ್ರಿಸ್ತನವರೆಂದು ತಿಳಿದುಕೊಳ್ಳಲಿ" ಎಂದು ಪೌಲನು ಹೇಳಿದವುಗಳಲ್ಲಿ ಈ ಸಂಗತಿಯು ಬಲು ಒತ್ತಾಯಪೂರ್ವಕವಾಗಿ ಉಲ್ಲೇಖವಾಗಿದೆ. "ಕ್ರಿಸ್ತನವನು" (ಅಕ್ಷರಶಃ ಕ್ರಿಸ್ತನ) ಎಂಬ ಪದವು "ಕ್ರೈಸ್ತನು" ಎಂಬುದರಿಂದ ಎರವಲು ಪಡೆದದ್ದಾಗಿದೆ. 2 ಕೊರಿಂಥದಲ್ಲಿ ಅಪಾಯದಲ್ಲಿರುವ ಸಂಗತಿ ಎಂದರೆ: ಕ್ರೈಸ್ತನ ಗುರುತೇನು? ಎಂಬುದಾಗಿದೆ. ಪೌಲನು ಕ್ರೈಸ್ತರಾದಂತವರ ಮೇಲೆ ದಾಳಿಮಾಡುವ ಸನದನ್ನು ಕೊಡುವವರ ಅಡಿಯಲ್ಲಿ ಇದ್ದವನಾಗಿದ್ದನು. ಇದು 2 ಕೊರಿಂಥದ ಕೇಂದ್ರ ವಿಷಯವಾಗಿದೆ.

2 ಕೊರಿಂಥದುದ್ದಕ್ಕೂ ಪೌಲನು ಸಮರ್ಥಿಸಿಕೊಳ್ಳುವವನಂತೆ ಕಾಣಿಸಿ ಕೊಳ್ಳುತ್ತಾನೆ. ಪೌಲನ ಕ್ರೈಸ್ತೀಯ ಸೇವೆಯ ಬಗೆಗೆ ಯಾರು ನಿಷ್ಟುರವಾಗಿ ಪ್ರಶ್ನಿಸುವವರಾಗಿದ್ದರೋ ಅವರು ಆತನು 1ನೇಯ ಕೊರಿಂಥವನ್ನು ಬರೆದ ನಂತರ ಅವರು ತಮ್ಮದೇ ಆದ ಶಿಫಾರಸು ಪತ್ರಗಳೊಂದಿಗೆ ಅಲ್ಲಿಗೆ ಬಂದಿದ್ದರು (3:1), ಮತ್ತು ಅಪೊಸ್ತಲರು "ನೀತಿ ವಂತಿಕೆಯ ದಾಸರು" ಎಂದು ತಮ್ಮಷ್ಟಕ್ಕೆ ತಾವೇ ಪ್ರತಿಪಾದಿಸಿದರು (11:13, 15). ಅದೇ ಸಮಯದಲ್ಲಿ, ಅವರು ತಮ್ಮನ್ನು ತಾವು ಪೌಲನೊಡನೆ ಹೋಲಿಸಿಕೊಳ್ಳುತ್ತಾ ಆತನು ನಿಜವಾದ "ಕ್ರಿಸ್ತನ ದಾಸನು" ಅಲ್ಲ ಎಂಬ ನಿರ್ಣಯಕ್ಕೆ ಬಂದರು (11:23). ಈ ಪುಸ್ತಕದುದ್ದಕ್ಕೂ ಅವರು ತಮ್ಮನ್ನು ಇತರ ಸೇವಕರ ಜೊತೆ ಹೋಲಿಸಿಕೊಳ್ಳುವುದರಲ್ಲಿ ಮತ್ತು ಇತರ ಸೇವಕರನ್ನು ತಮ್ಮ ಶಕ್ತಿಯ ಜೊತೆ ಮಾಪನ ಮಾಡುವಲ್ಲಿ ಸಂತೋಷಪಡುತ್ತಿರುವದು ವ್ಯಕ್ತವಾಗುತ್ತದೆ (ಹೋಲಿಸಿ 3:1; 10:12, 18). ಅಂತೆಯೇ ಪೌಲನು ಒಂದು ಮುಜುಗರದ ಸ್ಥಿತಿಯಲ್ಲಿ ಇದ್ದನು. ತನ್ನನ್ನು ತಾನು ಇತರ ಸೇವಕರೊಡನೆ ವರ್ಗೀಕರಿಸಿಕೊಳ್ಳುವದು ಅಥವಾ ಹೋಲಿಸಿಕೊಳ್ಳುವುದು ಆತನ ಆಯ್ಕೆಯಾಗಿರಲಿಲ್ಲ (10:12). ಹೀಗಿದ್ದಾಗ, ಸಭೆಯ ಒಳಿತಿಗಾಗಿ, ತಾನು ಅಧಿಕೃತ ಕ್ರೈಸ್ತ ಎಂದು ಆತನು ಪ್ರಕಟಿಸಬೇಕಾಗಿತ್ತು. 10:7ರಲ್ಲಿ ಆತನ ಪ್ರತಿಪಾದನೆಯು 11:23ರಲ್ಲಿನ, "ಅವರು ಕ್ರಿಸ್ತನ ಸೇವಕರೋ? ... ನಾನೂ ಹೆಚ್ಚಾಗಿ ..." ಎಂಬಲ್ಲಿ ದೃಢೀಕೃತವಾಗಿದೆ.

ಪೌಲನು ತನ್ನನ್ನು ತಾನು "ನಿಜ ಕ್ರೈಸ್ತ" ಎಂದು ಪ್ರತಿಪಾದಿಸಿಕೊಳ್ಳುವಂಥದ್ದು

ದಾಸನ ನಡತೆ ಮತ್ತು ಜೀವನ ಶೈಲಿಯ ಪ್ರಮುಖ ಅಂಶಗಳನ್ನು ಹಲವು ಬಾರಿ ನಮಗೆ ನೆನಪಿಸುವುದಾಗಿದೆಯೇ ಹೊರತಾಗಿ ಕೇವಲ ಯಾವುದೇ ಒಂದು ಬೋಧನೆಯ ಕುರುತಾದದ್ದು ಅಲ್ಲ. ಆತನ ಪ್ರತಿವಾದಿಗಳು ಆತನ ಮನವರಿಕೆಯನ್ನು ಪ್ರಶ್ನಿಸಲಿಲ್ಲ; ಅವರು ಕ್ರಿಸ್ತನ ಸೇವಕನಾದಂತಹ ಆತನ ಕಾರ್ಯಚಟುವಟಿಕೆಗಳ ಬಗೆಗೆ ಪ್ರಶ್ನಿಸಿದರು. ವಾಸ್ತವವಾಗಿ, 2 ಕೊರಿಂಥದಲ್ಲಿನ ಸೇವೆಯ ವಸ್ತುವು ಎಷ್ಟು ಮಹತ್ವವಾದದ್ದು ಎಂಬುದನ್ನು ವಿವರವಾದ ಸತ್ಯವೇದದ ಕೈಪಿಡಿಯು ದೃಷ್ಟಾಂತೀಕರಿಸುತ್ತದೆ. ಸೇವಕ (ಡೀಕನ್) ಮತ್ತು ಸೇವೆ (ಡೀಕನ್ನಿಕೆ) ಎಂಬ ಪದಗಳ ಇಂಗ್ಲೀಷ್ ಭಾಷಾಂತರಗಳು ಹಲವು ಬಾರಿ ಇತರ ಪದಗಳನ್ನು ಬಳಸಿದಾಗ 2 ಕೊರಿಂಥದಲ್ಲಿ ಹೆಚ್ಚಾದಂತೆ ಮೇಲಿಂದ ಮೇಲೆ ಉಳಿದ ಪೌಲನ ಪತ್ರಗಳೊಡನೆ ಸಂಯುಕ್ತಗೊಂಡು ಇವು ಕಾಣಿಸಿಕೊಳ್ಳುತ್ತದೆ ಡೀಕನಿಯಾ ಹನ್ನೊಂದು ಬಾರಿ ನಿಯುಕ್ತವಾಗಿದೆ (ಹೋಲಿಸಿ 3:7-9; 4:1; 5:18; 6:3; 8:4; 11:8), ಡೀಕನ್ನರು ಎಂಬ ಪದವು ನಾಲ್ಕು ಬಾರಿ ನಿಯುಕ್ತವಾಗಿದೆ (3:6; 6:4; 11:5, 23). ಈ ಪದದಗಳ ಮೇಲಿಂದ ಮೇಲಿನ ಬಳಕೆಯು ಅಧಿಕೃತ ಸೇವೆಯು 2 ಕೊರಿಂಥದ ಮೂಲವಸ್ತು ಆಗಿತ್ತು ಎಂದು ಸೂಚಿಸುತ್ತದೆ. ಪೌಲನು ತನ್ನ ವಿರೋಧಿಗಳ ವಿರುದ್ಧ ತನ್ನ ಸೇವೆಯನ್ನು ಸಮರ್ಥಿಸಿಕೊಳ್ಳುವ ನಿಟ್ಟಿನಲ್ಲಿ ಈ ಪತ್ರವನ್ನು ಬರೆಯುತ್ತಾನೆ.

## ಕ್ರೈಸ್ತನ ಗುರುತು

ಕ್ರಿಸ್ತನ ನ್ಯಾಯಬದ್ಧನಾದ ದಾಸನ ಗುರುತೇನು? ನಾವು ಯಾವ ಆಧಾರದ ಮೇಲೆ ಪೌಲನೊಡನೆ ನಾವು "ಕ್ರಿಸ್ತನವರು" ಎಂದು ಪ್ರತಿಪಾದಿಸುವವರಾಗಿದ್ದೇವೆ (10:7)? 10:1-11ರಲ್ಲಿ ಪೌಲನ ವಿರುದ್ಧ ಮಾಡಲ್ಪಟ್ಟ ಅಪಾದನೆಗಳು, ನಾವು ಪೌಲನ ವಿಮರ್ಷಕರು ನಿರ್ಮಿಸಿದ "ಪರೀಕ್ಷೆ" ಎಂದು ಗುರುತಿಸಬಹುದಾಗಿದ್ದು "ಆತನ ಪತ್ರಗಳು ಗೌರವವಾದ ವುಗಳೂ ಮತ್ತು ಬಲವುಳ್ಳವುಗಳೂ ಆಗಿವೆ; ಆದರೆ ಆತನ ಸಾಕ್ಷಾತ್ತಾಗಿ ಬಂದರೆ ಅವನು ನಿರ್ಬಲನು, ಮತ್ತು ಆತನ ಮಾತುಗಳು ಯಾವುದೇ ಗಣನೆಗೆ ಬಾರದವು ಆಗಿವೆ" ಎನ್ನುತ್ತಾರೆ (10:10). ಪೌಲನು ಆಕರ್ಷಕ ಮಾತುಗಾರನು ಆಗಿರಲಿಲ್ಲ. ಬದಲಾಗಿ ಈ ಟೀಕೆಯು ಅಕ್ಷರಶಃ ವ್ಯಕ್ತಪಡಿಸಿದ್ದಾಗಿದ್ದು ಆಗಿದ್ದು, "ಆತನ ಮಾತುಗಳು ತಾತ್ಸಾರವನ್ನು ಕೆರಳಿಸುವಂತಿದ್ದವು. " ಸ್ಥಿರ ಅನಾರೋಗ್ಯಕರ ದೈಹಿಕ ಸ್ಥಿತಿಯನ್ನು ಹೊಂದಿದವನೊಬ್ಬನಾದ (12:7), ಆತನ "ದೈಹಿಕ ಸ್ಥಿತಿಯು" ಅಶಕ್ತವಾದದ್ದಾಗಿತ್ತು. ಆತನ "ದೀನತೆಯು" (10:1) ಆತನ ಕೆಲಸದಲ್ಲಿ ಆತನಿಗೆ ಧೈರ್ಯವಾಗಲೀ ಮತ್ತು "ಸ್ಥಿರತೆ" ಯಾಗಲೀ ಇರಲಿಲ್ಲ ಎಂಬ ಚಿತ್ರಣವನ್ನು ಇದು ಕೊಡುತ್ತದೆ. ಈ ಟೀಕೆಗಳು, ಪೌಲನು "ಲೌಕೀಕ ರೀತಿಯಲ್ಲಿ" (ಅಕ್ಷರಶ ದೈಹೀಕ ರೀತಿಯಲ್ಲಿ) ನಡೆದುಕೊಳ್ಳುತ್ತಿದ್ದನು ಎಂಬ ಅಪಾದನೆಯನ್ನು ಅದಕ್ಕೆ ಸೇರಿಸುತ್ತವೆ. ಪ್ರತಿಪಾದಿಗಳು "ಪೌಲನು ನಿಜವಾಗಿಯೂ ಕ್ರೈಸ್ತನಾಗಿದ್ದಾದರೆ, ಅಲ್ಲಿ ಶಕ್ತಿಯ ಚಿಹ್ನೆಯು ಇರುತ್ತಿತ್ತು. ಕೆಲ ಪ್ರಕಟಣೆಗಳು ಮನವೊಲಿಸುವ (ಪ್ರೇರೇಪಿಸುವ) ವಕ್ಚಾತುರ್ಯ ಅಥವಾ ದಾಖಲೆಯ ಯಶಸ್ಸು ಅಲ್ಲಿವೆ" ಎಂದು ಹೇಳುತ್ತಿರುವದು ಕಂಡುಬರುತ್ತದೆ. ಪೌಲನ ಆಕರ್ಷಣರಹಿತ ಕಾಣುವಿಕೆಯು ಆತನು ಕ್ರೈಸ್ತನೂ ಅಲ್ಲ (10:7) ಅಥವಾ ಕ್ರಿಸ್ತನ ದಾಸನೂ ಅಲ್ಲ ಎಂಬುದು ತೋರಿಸುವಂತದ್ದು ಆಗಿತ್ತು (11:23).

ಕ್ರೈಸ್ತನ "ಗುರುತು" ಆತನ ಶಕ್ತಿಯು ಸ್ಪಷ್ಟವಾಗಿ ಕಂಡುಬರಬೇಕು ಎಂದು ಪ್ರತಿವಾದಿ ಗಳಿಗೆ ಹೇಳಿದರು. ಆಕರ್ಷಣರಹಿತ ಕಾಣುವಿಕೆಯು ಆತನಲ್ಲಿನ ಆತ್ಮನ ಶಕ್ತಿಯ ಕೊರತೆಯ ಚಿಹ್ನೆಯು ಇದಾಗಿದೆ ಎಂದು ಅವರಿಗೆ ಹೇಳುವವರಾಗಿದ್ದರು. ಪೌಲನು ತನ್ನ ಸೇವೆಯನ್ನು "ಐಹಿಕ ರೀತಿಯಲ್ಲಿ" ನಡೆಸುತ್ತಾನೆ ಎಂದು ಹಿಯಾಳಿಸುವಲ್ಲಿ ಅವರು ನಿಜವಾಗಿಯೂ ಆತ್ಮದಲ್ಲಿಯೂ ಆತನ ಕೊರತೆಯಲ್ಲಿ ಇದ್ದಾನೆ ಎಂದು ತಿಳಿಸುವವರಾಗಿದ್ದರು. "ಐಹಿಕ ರೀತಿಯಲ್ಲಿ" *(ಕಾಟಾ ಸರಕಾ)* ಇರುವದು ಸಾಮಾನ್ಯವಾಗಿ "ಆತ್ಮದ ರೀತಿಯಲ್ಲಿ" (*ಕಾಟಾ*

*ಪೆನುಮಾ,* ರೋಮಾಪುರ 8:4, 5) ಇರುವುದಕ್ಕೆ ವಿರುದ್ಧವಾಗಿರುತ್ತದೆ. ಪೌಲನು ತನ್ನ ದೈಹಿಕ "ಬಲಹೀನತೆ" ಮತ್ತು ಒಳ್ಳೆಯ ಮಾತಿನ ಕೊರತೆಯು, ಅವರ ಅಧಿಕೃತತೆಯ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದರಲ್ಲಿ ವಿಫಲನಾದನು.

ಪೌಲನು ತನ್ನ ಮೇಲೆ ಬಂದ ಆಪಾದನೆಗಳಿಗೆ ಪ್ರತಿಕ್ರಿಯಿಸುವಾಗ ವ್ಯಂಗ್ಯಮಯವಾದದ್ದನ್ನು ನಾವು ಗಮನಿಸಬಹುದು "ಪೌಲನು ನಮ್ಮೆದುರಿನಲ್ಲಿರುವಾಗ ದೀನನಾಗಿ ನಡಕೊಳ್ಳುವವನೂ, ದೂರದಲ್ಲಿರುವಾಗ ನಮ್ಮನ್ನು ಕುರಿತು ದಿಟ್ಟತನ ತೋರುವವನೂ ಆಗಿದ್ದಾನೆ ಎಂದು ಹೇಳುವವರು ನಿಮ್ಮಲ್ಲಿದ್ದಾರಲ್ಲಾ, ಆ ಪೌಲನೆಂಬ ನಾನು ಕ್ರಿಸ್ತನ ಶಾಂತ ಮನಸ್ಸನ್ನೂ ಸಾತ್ವಿಕತ್ವವನ್ನೂ ನೆನಪಿಗೆ ತಂದುಕೊಂಡು" (10:1). "ಶಾಂತ ಮನಸ್ಸು ಮತ್ತು ಸಾತ್ವಿಕತ್ವ"ಗಳು ದೂರವಾದವು ಆಗಿವೆ. ಗಿಂಜುವದು ಮತ್ತು ಹೀನೈಸುವದು ಎಂಬ ಪಾರಿಭಾಷಿಕಗಳು ಇದಕ್ಕೆ ಸೂಚಿಸಲ್ಪಟ್ಟಿವೆ. ಆದರೆ ಬಲಹೀನ ಎಂದು ಲೋಕವು ಪರಿಗಣಿಸುವವರ ಗುಣಲಕ್ಷಣಗಳು ಆತನ ಪ್ರತಿವಾದಿಗಳ ದೃಷ್ಟಿಯಲ್ಲಿ ಆತನನ್ನು ಅಯೋಗ್ಯನಾಗಿ ಮಾಡುವಂತವುಗಳು ಆಗಿದ್ದು ಆತನು ಕ್ರಿಸ್ತನವನು ಎಂದು ಒಪ್ಪಿಕೊಂಡಿದ್ದಕ್ಕೆ ಚಿನ್ಹೆಯೂ ಆಗಿವೆ (10:7). ಆತನು ತನ್ನ ಓದುಗರಿಗೆ "ಶಾಂತ ಮನಸ್ಸನ್ನೂ ಸಾತ್ವಿಕತ್ವ" ದಿಂದ ವಿಜ್ಞಾಪಿಸುವವನೂ ಆಗಿದ್ದಾನೆ. ಪೌಲನು ಕ್ರಿಸ್ತನ ಸೇವೆಗೆ ಮಾದರಿಯಾಗಿದ್ದಾನೆ.

## ಸಭೆಯ ಮಧ್ಯದಲ್ಲಿ ಹಿಡಿಯಲ್ಪಟ್ಟದ್ದು

ಪೌಲ ಮತ್ತು ಆತನ ಪ್ರತಿವಾದಿಗಳು ತಮ್ಮತಮ್ಮಲ್ಲಿ ಅಧಿಕೃತ ಕ್ರೈಸ್ತರೆಂದು ಮಾನ್ಯಮಾಡಿಕೊಂಡದ್ದನ್ನು ಕೇಳಿದ ಕೊರಿಂಥೆಯರ ಬಗೆಗೆ ನಾವು ಕರುಣೆಪಡಬೇಕು (5:12; 6:4). ನ್ಯಾಯಬದ್ಧ ಕ್ರಿಸ್ತನ ಸೇವಕನ ಪ್ರಸ್ತಾವನೆಗಳ ಮಾಪನದ ವಿಭಿನ್ನ ಶ್ರೇಣಿಗಳನ್ನು ನಿವೇಧಿಸುವಲ್ಲಿ ಎರಡೂ ಬದಿಯಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಒಂದು ಸೇವೆಯನ್ನು ಅಧಿಕೃತವಾದದ್ದು ಎಂದು ಆರಿಸಿಕೊಂಡಿರುವಂತಹ ಸಭೆಯು ಯಾವದು ಎಂಬುದನ್ನು ನಿರ್ಧರಿಸುವುದಕ್ಕೆ ಸಭೆಯು ಕರೆಯಲ್ಪಟ್ಟಿದೆ. ಪೌಲನ ಮಾತುಗಳನ್ನು ಅವರು ಕಾಪಾಡಿಕೊಳ್ಳುವಲ್ಲಿ ಮತ್ತು ಆತನ ಪ್ರತಿವಾದಿಗಳ ಮಾತುಗಳನ್ನು ಕೇಳದೇ ಇರುವಲ್ಲಿ ಕೊರಿಂಥಿಯರು ಸರಿಯಾದ ನಿರ್ಧಾರಕ್ಕೆ ಬಂದರು ಎಂದು ನಾವು ಭಾವಿಸಬಹುದು.

ಮೂಲ ಓದುಗರ ಸ್ಥಿತಿಯು ಹಿಂದಿನ ಪ್ರತಿಯೊಂದು ಸಭೆಯವರಿಗಿಂತ ಅಷ್ಟೇನೂ ವಿಭಿನ್ನವಾಗಿಲ್ಲ. ಕೆಲ ವರ್ಷಗಳ ಹಿಂದೆ ನಾವೆಂದಿಗೂ ಊಹಿಸಲಾಗದ ಕೆಲ ಕಾರ್ಯಕ್ರಮಗಳಿಗಾಗಿರುವಂತಹ ಸಾಧ್ಯತೆಗಳನ್ನು ನಾವು ಇಂದು ಕಾಣುತ್ತೇವೆ. ಯಾವ ತರದ ಸಭೆಯು ನಾವಾಗಿರಬೇಕು ಎಂಬುದನ್ನು ನಿರ್ಧರಿಸಲು ಅನೇಕ ಮಾರ್ಗಗಳು ನಮ್ಮನ್ನು ಒತ್ತಾಯಿಸುತ್ತವೆ. ಈ ಅವಕಾಶಾಗಳಿಗಾಗಿ, 2 ಕೊರಿಂಥ ಪತ್ರಿಕೆಯ ಹಿಂದೆ ಇರುವ ಪ್ರಶ್ನೆಗಳೇ ನಮ್ಮ ಮುಂದೆ ಇರುವುದಕ್ಕೆ ಕಾರಣಗಳು ಆಗಿವೆ. 2 ಕೊರಿಂಥ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟದ್ದು ಅಧಿಕೃತ ಕ್ರೈಸ್ತನ ಗುಣಗಳು ಇಂದೂ ಕೂಡಾ ಕ್ರೈಸ್ತನ ದಾಸನ ಚಿಹ್ನೆಗಳೂ ಕೂಡಾ ಆಗಿವೆ. "ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳಿರಿ" ಎಂದು ಪೌಲನು ತನ್ನನ್ನು ಪರೀಕ್ಷಿಸುವ ಪ್ರತಿಯೊಬ್ಬರಿಗೂ ಸವಾಲನ್ನು ಒಡ್ಡುತ್ತಾನೆ (13:5).

## 2 ಕೊರಿಂಥದವರಿಗೆ ಓದುತ್ತಿರುವಂತೆ

2 ಕೊರಿಂಥದ ಓದುಗರು ಈ ಪುಸ್ತಕದ ಪ್ರತಿಯೊಂದು ಪುಟಗಳು ಅಧಿಕೃತ ಕ್ರೈಸ್ತತ್ವದ ವಸ್ತುವಿನ ಬಗೆಗೆ ಸಂಬಂಧಿಸಿರುವಿಕೆ, ಪೌಲನ ದಾಟಿ ಮತ್ತು ಆತನ ದೃಷ್ಟಿಕೋನ ಆಗಾಗ್ಗೆ ಕ್ರಾಂತಿಕಾರಕವಾಗಿ ಬದಲಾವಣೆ ಹೊಂದುವುದನ್ನು ಇವುಗಳಲ್ಲಿ ಬಹುತೇಕವಾದವುಗಳನ್ನು ಅರಿತುಕೊಳ್ಳದೇ ಇರಲಾರರು. ಕೊರಿಂಥದವರು ಪೌಲನ ಕಾರ್ಯದ ಬಗೆಗೆ ತಮ್ಮ ಹಿಂದಿನ ಸವಾಲಿನಿಂದ ಭಾಗಗಳು ಸೂಚಿಸುತ್ತವೆ. ಈ ಭಾಗದಲ್ಲಿ, ಕೊರಿಂಥಿಯನ್ನರ ಸಮಸ್ಯೆಯಿಂದ

ನರಕಯಾತನೆಗೆ ಒಳಗಾದ (2:12, 13), ಪೌಲನ ಮನದ ಭಾವನೆಯು ಈಗ ಶಮನವಾಗಿದ್ದು ನಮಗೆ ಕಂಡುಬರುತ್ತದೆ. ಹೇಗೋ ಆತನ ಸೇವೆಯ ಗಂಭೀರವಾದ ಗಂಡಾಂತರದ ಅಡಿಯಲ್ಲಿ ಸಿಲುಕಿರುವುದನ್ನು ಅಧ್ಯಾಯ 10ರಿಂದ 13ರಲ್ಲಿನ ಪೌಲನ ದಾಟಿಯು ಸೂಚಿಸುವುದಾಗಿದೆ ಆತನು ಸಂಸ್ಥಾಪಿಸಿದ ಸಭೆಯು ಆತನು ನಿಜ ಕ್ರೈಸ್ತನು ಎಂಬುದನ್ನು ವಿಶದೀಕರಿಸಲು ಒತ್ತಾಯಿಸುತ್ತಿದೆ (10:7; 11:23)! ಸಭೆಗೆ ಮೂರನೆಯ ಭೇಟಿಗೆ ಸಿದ್ಧವಾಗುತ್ತಿದ್ದಂತೆ, ಅಲ್ಲಿ ಯಾವ ತರದ ಸ್ವಾಗತವು ಆತನಿಗೆ ಸಿಕ್ಕುವದು ಎಂಬುವುದರ ಬಗೆಗೆ ಆತನು ಅನಿಶ್ಚಿತನಾಗಿದ್ದನು. ಕೊರಿಂಥದ ತನ್ನ ಎರಡನೆಯ ಪ್ರಯಾಣದಲ್ಲಿ ಎದುರಿಸಿದಂತಹ ಸಮಸ್ಯೆಯನ್ನು ಈಗಲೂ ಕೂಡಾ ಎದುರಿಸಬಹುದೆಂಬ ಭಯವು ಅವನಲ್ಲಿತ್ತು (ಹೋಲಿಸಿರಿ 2:1-4). ಈ ಅಧ್ಯಾಯಗಳ ಸಮಸ್ಯೆಯು ಇನ್ನೂ ಮುಗಿದಿಲ್ಲ ಎಂದು ಧಾರ್ಮಿಕವಾಗಿ ಸೂಚಿಸುತ್ತಲಿವೆ. ಸಭೆಯ ಜೀವಿತ ಇನ್ನೂ ಬಿರುಗಾಳಿಯಂತಿತ್ತು!

2 ಕೊರಿಂಥದ ಇನ್ನೊಂದು ಭಾಗವು, ಚರ್ಚೆಯ ಪ್ರವಾಹದಲ್ಲಿ ಸಿಲುಕಿಕೊಂಡಿತ್ತು. ಉದಾಹರಣೆಗೆ, 6:14-7:1ರಲ್ಲಿ, "ಅಪನಂಬಿಗಸ್ತರೊಡನೆ ಹೊಂದಾಣಿಕೆಯಿಂದಿರುವ" ಕ್ರೈಸ್ತರ ವಿರುದ್ಧ ಎಚ್ಚರಿಕೆಯನ್ನು ಕೊಡುವ 6:13 ಮತ್ತು 7:2 ರಲ್ಲಿನ ವಿಚಾರಗಳು ಒಂದಕ್ಕೊಂದು ಮಾರಕವೆಂದು ಕಾಣುತ್ತವೆ. ಇದಕ್ಕೆ ಜೊತೆಯಾಗಿ, ಈ ಪುಸ್ತಕವು ಕಾಣಿಕೆ ಕೂಡಿಸುವ ವಿಷಯದಲ್ಲಿ ಪಾಲ್ಗೊಳ್ಳುವುದರ ಅವಶ್ಯಕತೆಯ ಬಗೆಗೆ ಎರಡು ಬೇರೆ ಬೇರೆ ಪಾಠಗಳನ್ನು ಹೊಂದಿರುವುದನ್ನು ಕಾಣುತ್ತೇವೆ (ಅಧ್ಯಾಯ 8 ಮತ್ತು 9). ಎರಡನೆಯ ಪಾಠವು 9:1ರಲ್ಲಿ "ದೇವಜನರಿಗೋಸ್ಕರ ನಡೆಯುವ ಸಹಾಯ ಕಾರ್ಯವನ್ನು ಕುರಿತು ನಿಮಗೆ ಬರೆಯುವುದಕ್ಕೆ ಅವಶ್ಯವಿಲ್ಲ ..." ಎಂದು ಪ್ರಾರಂಭ ವಾಗುತ್ತದೆ.

ಈ ಪತ್ರಿಕೆಗಳು ಸ್ಪುಟವಾಗಿ ಚಲಿಸುವಲ್ಲಿ ಉಂಟಾದ ಅಡೆತಡೆಗಳಿಗೆ ಯಾವುದೇ ತರದ ಸರಿಯಾದ ವಿವರಣೆಯನ್ನು ಕೊಡಲಾಗದು. ಇದೇ ಪುಸ್ತಕದಲ್ಲಿ ಸಮಸ್ಯೆಗಳು ಮುಗಿದ ಹಾಗೆ ಕಂಡುಬರುತ್ತವೆ (ಅಧ್ಯಾಯ 7) ಮತ್ತು ಅದೇ ಸಮಯದಲ್ಲಿ ಇನ್ನಿತರ ಸಮಯದಲ್ಲಿ ಸಮಸ್ಯೆಗಳು ಬಗೆ ಹರಿಯದೇ ಇರುವದು ಕಂಡುಬರುತ್ತವೆ ಏಕೆ (ಅಧ್ಯಾಯ 10 ರಿಂದ 13ರವರೆಗೆ) ಎಂದು ಪಂಡಿತರು ಚರ್ಚೆ ಮಾಡಿದ್ದುಂಟು. ಈ ಪತ್ರಗಳು ಒಂದೇ ಬಾರಿ ಬರೆಯಲ್ಪಟ್ಟವುಗಳಲ್ಲ ಎಂದು ಈ ಅಡ್ಡಿಪಡಿಸುವಿಕೆಗಳು ಸೂಚಿಸುವವುಗಳಾಗಿವೆ. ಬಹುಶಃ ಕೊರಿಂಥದಲ್ಲಿನ ಸ್ಥಿತಿಯ ಅನೇಕ ಬಾರಿ ಬದಲಾವಣೆಯಾಗಿರಬಹುದು. ಪೌಲನ ಬದಲಾಗುತ್ತಿರುವದ ಮನಸ್ಥಿತಿಯು ಆ ಸಭೆಯ ಸ್ಥಿತಿಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತದೆ.

ಪತ್ರಿಕೆಗಳಲ್ಲಿನ ಈ ಎಲ್ಲಾ ಬದಲಾವಣೆಗಳು ನಮಗಾಗಿನ ಸಭೆಯ ಜೀವಿತದ ಅನುಭವವು ಕೊರಿಂಥ ಸಭೆಯಲ್ಲಿದ್ದಂತವುಗಳು ಬೇರೆ ಆಗಿರಲಿಲ್ಲ ಎಂದು ನಮಗೆ ನೆನಪುಮಾಡಿಕೊಡುತ್ತವೆ. ಎಲ್ಲಾ ಸಮಸ್ಯೆಗಳು ಕ್ವಚಿತ್ತಾಗಿ ಬಗೆಹರಿಯಲ್ಪಟ್ಟ ಸಮಯದಲ್ಲಿ, ಹಳೆಯ ಸಮಸ್ಯೆಗಳು ಹೊಸದವುಗಳಾಗಿ ರೂಪಾಂತರ ಹೊಂದುತ್ತಿದ್ದವು. ಕೆಲ ಸಮಸ್ಯೆಗಳು ಕೆಲ ಸಮಯದಲ್ಲಿ ಬಗೆ ಹರಿಯುವಂತೆ ಕಂಡರೂ ಹಲವುಬಾರಿ ಅವುಗಳು ಸಭೆಯ ಇತಿಹಾಸದಲ್ಲಿ ಸಾಗಿಹೋದ ಕ್ಷಣಗಳಾಗಿವೆಯೇ ಹೊರತು ಮತ್ತೇನಿಲ್ಲ. ಕೊರಿಂಥದವರಿಗೆ ಬರೆದ ಪತ್ರಗಳಲ್ಲಿ ಸಭೆಯ ಜೀವಿತವು ಯಾವಾಗಲೂ ದುಃಖದ ಕ್ಷಣಗಳಿಂದಲೇ ತುಂಬಿರುತ್ತಿತ್ತು ಎಂಬುದನ್ನು ನಮಗೆ ನೆನಪಿಸಿಸುವಂತವುಗಳು ಆಗಿವೆ.

## ಮುಕ್ತಾಯ

ನೈಜ್ಯ ಕ್ರೈಸ್ತನ ಗುರುತೇನು? "ಸೇವೆ ಮಾಡಿಸಿಕೊಳ್ಳುವುದಕ್ಕಲ್ಲ ಸೇವೆ ಮಾಡುವದಕ್ಕೆ" ಎಂಬ ಕಾರ್ಯದಲ್ಲಿ ಸಭೆಯಲ್ಲಿರುವ ಕಾರ್ಯಕ್ರಮಗಳು ನಡೆಯುವಂತವುಗಳಾಗಿದೆ. ಕೊರಿಂಥದವರು ಆ ಆಯ್ಕೆಯ ಸಮಸ್ಯೆಯನ್ನು ಎದುರಿಸಿದರು.

ಸಮಾಕಾಲೀನ ಸಭೆಯು, ಅದರ ಕಾರ್ಯಕ್ರಮಗಳನ್ನು ಯೋಜಿಸುವಾಗ,

ವಿವಿಧವಾದ ಆಯ್ಕೆಗಳನ್ನು ಎದುರಿಸುವಂತದ್ದಾಗಿದೆ. ಆ ಕಾರಣದಿಂದಲೇ 2 ಕೊರಿಂಥದವರಿಗೆ ಬರೆದ ಪತ್ರಿಕೆಯು ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತದೆ.